


ಸ್ವರ್ಗ
"ತಾಯಿಯ
ಪಾದದಡಿ
ಇರುವ
ದಿವ್ಯ ಲೋಕ."
- ಬೀChi
FB/ಕರ್ನಾಟಕ ವಿಶೇಷ



ಮಿತ್ರ
"ಸಂಸ್ಕೃತ
ಭಾಷೆಯಲ್ಲಿ
ಸಾಲವನ್ನು
ಕೇಳುವ ಗೆಳೆಯ."
- ಬೀChi
FB/ಕರ್ನಾಟಕ ವಿಶೇಷ


ಕ್ಷಯ
"ಶ್ರೀಮಂತನ
ಕ್ಷಯವೇ
ಡಾಕ್ಟರನ
ಅಕ್ಷಯ ಪಾತ್ರೆ."
- ಬೀChi
FB/ಕರ್ನಾಟಕ ವಿಶೇಷ


ಮೌನ
"ಮೂಕನ
ಮಾತೃಭಾಷೆಯೆ
ಮೌನ."
- ಬೀChi
FB/ಕರ್ನಾಟಕ ವಿಶೇಷ



ಕಿವುಡು
"ಹಸಿದ ಹೊಟ್ಟೆಗೆ,
ಉಕ್ಕುವ ಪ್ರಾಯಕ್ಕೆ
ಇರುವಷ್ಟು ಕಿವುಡು
ಯಾವ ಕಲ್ಲಿಗೂ
ಇಲ್ಲ."
- ಬೀChi
FB/ಕರ್ನಾಟಕ ವಿಶೇಷ


ಚರ್ಚೆ
"ಜಾಣರು
ಗುದ್ದಾಡಿದರೆ ಚರ್ಚೆ
ಆಗುತ್ತದೆ, ದಡ್ಡರು
ಚರ್ಚೆ ಮಾಡಿದರೆ
ಗುದ್ದಾಟ
ಆಗುತ್ತದೆ."
- ಬೀChi
FB/ಕರ್ನಾಟಕ ವಿಶೇಷ


ಮಾಡು
"ಮಾಡ
ಬಹುದಾದಾಗ
ಮಾಡದಿದ್ದರೆ,
ಮಾಡಲೇ
ಬೇಕಾದಾಗ
ಮಾಡಲಾಗುವುದಿಲ್ಲ."
- ಬೀChi
FB/ಕರ್ನಾಟಕ ವಿಶೇಷ



ಪಾರ್ಟಿ
"ಕೆಲವೇ ಜಾಣರ
ಲಾಭಕ್ಕಾಗಿ
ಹಲವಾರು
ಮೂರ್ಖರು
ಕಟ್ಟುವ ಗುಂಪು."
- ಬೀChi
FB/ಕರ್ನಾಟಕ ವಿಶೇಷ


ಮುಖ
"ಒಂದು ಕೆಟ್ಟ ಮನಸ್ಸಿಗಿಂತಲೂ ನೂರು ಕೆಟ್ಟ ಮುಖಗಳು ಮೇಲು."
- ಬೀChi
FB/ಕರ್ನಾಟಕ ವಿಶೇಷ


ವಿವೇಕಿ
"ವಿವೇಕಿಯ
ನಾಲಗೆ
ಹೃದಯದಲ್ಲಿದೆ,
ಅವಿವೇಕಿಯ
ಹೃದಯವು
ನಾಲಗೆಯಲ್ಲಿದೆ."
- ಬೀChi
FB/ಕರ್ನಾಟಕ ವಿಶೇಷ


ಜೇಲು
"ರಜೆಯ ಮೇಲೆ
ಬಂದಾಗ
ಕಳ್ಳರು ತಂಗುವ
ಗವರ್ನಮೆಂಟ್
ಗೆಸ್ಟಹೌಸ್."
- ಬೀChi
FB/ಕರ್ನಾಟಕ ವಿಶೇಷ



ಬುದ್ಧಿ
"ಬಡವನ
ಏಕಮಾತ್ರ
ಸಂಪತ್ತು."
- ಬೀChi
FB/ಕರ್ನಾಟಕ ವಿಶೇಷ


ಬಡತನ
"ಸಾಹಿತ್ಯವು
ಶ್ರೀಮಂತರಿಗೆ
ಕತೆಯನ್ನು ಕೊಡುತ್ತದೆ
– ಬಡತನವು
ಸಾಹಿತ್ಯಕ್ಕೆ ಕತೆಯನ್ನು
ಕೊಡುತ್ತದೆ."
- ಬೀChi


FB/ಕರ್ನಾಟಕ ವಿಶೇಷ





ಶ್ರೀಮಂತಿಕೆ
"ಶ್ರೀಮಂತಿಕೆಯ ಗುಟ್ಟು 'ಗಳಿಸು' ಎಂಬುದಲ್ಲ, 'ಉಳಿಸು' ಎಂಬುದು."
- ಬೀChi
FB/ಕರ್ನಾಟಕ ವಿಶೇಷ





FB/ಕರ್ನಾಟಕ ವಿಶೇಷ


ಆಯುಧ
"ಮಗುವಿಗೆ ಅಳು,
ಹೆಣ್ಣಿಗೆ ನಗು,
ಅವಿವೇಕಿಗೆ ಧೈರ್ಯ,
ಅಪ್ರಾಮಾಣಿಕನಿಗೆ
ರಾಜಕಾರಣ
ಅತ್ತ್ಯುತ್ತಮ
ಆಯುಧಗಳು."
- ಬೀChi
FB/ಕರ್ನಾಟಕ ವಿಶೇಷ



ಪ್ರಳಯ
"ಹೆಣ್ಣು ಚಿನ್ನವನ್ನು,
ರಾಜಕಾರಣಿ
ಅಧಿಕಾರವನ್ನು
ಒಲ್ಲೆ ಎಂದ ದಿನವೇ
ಪ್ರಳಯವಾಗುತ್ತದೆ."
- ಬೀChi
FB/ಕರ್ನಾಟಕ ವಿಶೇಷ


ಪ್ರೇಮಿ
"ಅರಸ
ಮತ್ತು ಪ್ರೇಮಿ
ಏನನ್ನಾದರೂ
ಸಹಿಸಬಲ್ಲರು
– ಒನ್-ಬೈಟು
ಒಂದನ್ನು ಬಿಟ್ಟು."
- ಬೀChi
FB/ಕರ್ನಾಟಕ ವಿಶೇಷ



ಸ್ವಾರ್ಥ
"ಮನುಷ್ಯನನ್ನು
ದುಡಿಯಲು
ಹಚ್ಚುವ
ಏಕಮಾತ್ರ
ದೇವರು."
- ಬೀChi
FB/ಕರ್ನಾಟಕ ವಿಶೇಷ



ಭಿಕ್ಷುಕ
"ದುಡಿಯದೇ
ಇರುವ
ಪ್ರತಿಯೊಬ್ಬ
ಶ್ರೀಮಂತನೂ
ಭಿಕ್ಷುಕನೇ"
- ಬೀChi
FB/ಕರ್ನಾಟಕ ವಿಶೇಷ



ಕರ್ತವ್ಯ
"ದೇವನೆಂಬ
ಧಣಿಗೆ
ಮನುಷ್ಯನು
ಕೊಡಬೇಕಾದ
ಬಾಕಿ."
- ಬೀChi
FB/ಕರ್ನಾಟಕ ವಿಶೇಷ


ಕೀರ್ತಿ
"ಇದನ್ನು ಗಳಿಸಲು ಮೊದಲು ಕಷ್ಟ, ನಂತರ ಉಳಿಸಲು ಕಷ್ಟ, ಕಳೆದುಕೊಂಡರಂತೂ ಕಡೆಯವರೆಗೂ ಕಷ್ಟ."
- ಬೀChi
FB/ಕರ್ನಾಟಕ ವಿಶೇಷ



ಗಡ್ಡ
"ಗಡ್ಡ ದೊಡ್ಡತನದ
ಗುರುತಾಗಿದ್ದರೆ
ಮೇಕೆಯೇ
ಮುಖ್ಯಮಂತ್ರಿಯಾಗ
ಬೇಕಿತ್ತು."
- ಬೀChi
FB/ಕರ್ನಾಟಕ ವಿಶೇಷ



ಏಕೆ
"ಚಿಕ್ಕ ಮಗು ಮಾತು
ಮಾತಿಗೆ ಕೇಳುವ
ಈ 'ಏಕೆ'ಯಲ್ಲಿಯೇ
ಎಲ್ಲ ತತ್ವಜ್ಞಾನದ
ತಥ್ಯವು
ಅಡಕವಾಗಿದೆ."
- ಬೀChi
FB/ಕರ್ನಾಟಕ ವಿಶೇಷ


ಅಗಳು
"ಅನ್ನ,ಅರಿಬೆ,
ಅಕ್ಷರ ಎಂಬೀ
ಮೂರು 'ಅ'ಗಳು
ಪ್ರತಿಯೊಬ್ಬನಿಗೂ
ಅವಶ್ಯಕ."
- ಬೀChi
FB/ಕರ್ನಾಟಕ ವಿಶೇಷ




ಕಲಾವಿದ
"ಜೀವನವನ್ನು ಇದ್ದಂತೆ ನೋಡುವವನಲ್ಲ, ತನಗೆ ಬೇಕಾದಂತೆ ನೋಡುವವನು."
- ಬೀChi
FB/ಕರ್ನಾಟಕ ವಿಶೇಷ


ಜೀವನ
"ಜೀವನವು ಬಸ್ಸಿನ
ಪ್ರಯಣವಿದ್ದಂತೆ
– ಓಡುವಾಗ
ಗಾಳಿ.ಬಹಳ,
ನಿಂತಾಗ ವಿಪರೀತ
ಸೆಕೆ."
- ಬೀChi
FB/ಕರ್ನಾಟಕ ವಿಶೇಷ



ಮನಸ್ಸು
"ಮುಖ ತೊಳೆಯಲು
ಮಳೆಯ ನೀರು
ಸಾಕು, ಮನಸ್ಸು
ತೊಳೆಯಲು
ಕಂಣೀರೇ ಬೇಕು."
- ಬೀChi
FB/ಕರ್ನಾಟಕ ವಿಶೇಷ


ಕನ್ನಡ
"ಕನ್ನಡದಲ್ಲಿ ನಾಲ್ಕು ಬಗೆ
– ಹೋದುದು ಹಳೆಗನ್ನಡ,
ಹೋಗುತ್ತಿರುವುದು
ನಡುಗನ್ನಡ,
ನಡೆಯುತ್ತಿರುವುದು
ಬಡಕನ್ನಡ,
ಬರಲಿರುವುದು ಎಬಡ
ಕನ್ನಡ."
- ಬೀChi
FB/ಕರ್ನಾಟಕ ವಿಶೇಷ


ಪುಸ್ತಕ
"ಮುಂದಿನ
ಪೀಳಿಗೆಗೆ ಸಾಹಿತಿ
ಕೊಟ್ಟು ಸಾಯುವ
ಆಸ್ತಿಯೇ ಪುಸ್ತಕ."
- ಬೀChi
FB/ಕರ್ನಾಟಕ ವಿಶೇಷ